ಸಲ್ಲಿಸಲಾಗಿದ್ದು ಮತ್ತೆ ೨೩-೧೦-೮೬ ರಿಂದ ಪ್ರಾರಂಭಿಸಲಾಗಿದೆ. ಇದಕ್ಕಾಗಿ ತಗುಲಿದ ವೆಚ್ಚ ರೂ. ೩೬,೬೬೩-೫೫ ಮಾತ್ರ.

ಈ) ೨-೧೨-೮೯ರಂದು.

ಉ) ಬರ ಪರಿಹಾರ ಕಾಮಗಾರಿ ೧೯೮೫-೮೬ರಲ್ಲಿ ಒಂದು ತೆರೆದ ಬಾವಿಯನ್ನು ತೆಗೆದು ಕೊಳ್ಳಲು ಭೂ ಸೇನಾ ನಿಗಮ ಬೈಲಹೊಂಗಲಕ್ಕೆ ತಿಳಿಸಲಾಗಿತ್ತು. ೧೯೮೬-೮೭ನೇ ಸಾಲಿನಲ್ಲಿ ರೂ. ೧೮ ೮೦೦-೦೦ಗಳನ್ನು ಮೊದಲನೇ ಕಂತಾಗಿ ಕೊಡಲಾಯಿತು. ೩-೨ ೮೭ರಲ್ಲಿ ಸಂಬಂಧಪಟ್ಟ ಸಹಾಯಕ ಕಾರ್ಯನಿರ್ವಾಹಕ ಅಭಿಯಂತರು ಮತ್ತು ಭೂ ಶಾಸ್ತ್ರಜ್ಞರು ಎರಡು ಸ್ಥಳಗಳನ್ನು ಗುರುತು ಮಾಡಿದರು. ೨೪-೧೨-೮೭ರಲ್ಲಿ ಡಿ.ಡಿ.ಸಿ. ಸಭೆಯಲ್ಲಿ ಕೆಲಸವನ್ನು ಶೀಘ್ರವಾಗಿ ತೆಗೆದುಕೊಳ್ಳಲು ತೀರ್ಮಾನಿಸಲಾಯಿತು. ಭೂ-ಸೇನಾ ನಿಗಮದವರಿಂದ ಯೋಜನೆ ಮತ್ತು ನಕ್ಷೆಗಳು ತಯಾರಾಗುತ್ತಿವೆ.

ಊ) ಈ ಕಾಮಗಾರಿಯನ್ನು ತೆಗೆದುಕೊಳ್ಳುವ ಕಾರ್ಯಕ್ರಮ ಪ್ರಾರಂಭ ಮಾಡಿದ್ದಾರೆ.

ಯುದ್ಧದಲ್ಲಿ ಮರಣ ಹೊಂದಿದ ಬ್ರಿಟಿಷ್ ಅಧಿಕಾರಿಗಳ ಸಮಾಧಿಗಳ ಬಗ್ಗೆ

೬೩೮. ಶ್ರೀ ಚಂದ್ರಕಾಂತ ಬೆಲ್ಲದ್ (ಧಾರವಾಡ).—ಮಾನ್ಯ ಕಾನೂನು, ಸಂಸದೀಯ ವ್ಯವಹಾರಗಳು, ಆಹಾರ ಮತ್ತು ನಾಗರೀಕ ಸರಬರಾಜು ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಧಾರವಾಡ ಮಹಾನಗರ ಹದ್ದಿನಲ್ಲಿ ಕಿತ್ತೂರು ಚೆನ್ನಮ್ಮ ರಾಣಿಯೊಂದಿಗೆ ಯುದ್ಧದಲ್ಲಿ ಮರಣ ಹೊಂದಿದ ಬ್ರಿಟಿಷ್ ಅಧಿಕಾರಿಗಳ ಸಮಾಧಿಗಳು (ಸಿಮೆಟ್ರಿ) ಇರುವುದರ ಬಗ್ಗೆ ಸರಕಾರದ ಗಮನಕ್ಕೆ ಬಂದಿದೆಯೇ?

ಆ) ಹಾಗಾದರೆ ಐತಿಹಾಸಿಕ ಮಹತ್ವದ ಈ ಅವಶೇಷಗಳ ರಕ್ಷಣೆಯ ವಿಚಾರವಾಗಿ ಸರ್ಕಾರದವರು ಯಾವ ಕ್ರಮ ಕೈಗೊಳ್ಳುವರು?

ಶ್ರೀ ಎ. ಲಕ್ಷ್ಮೀಸಾಗರ್ (ಕಾನೂನು, ಸಂಸದೀಯ ವ್ಯವಹಾರಗಳು, ಆಹಾರ ಮತ್ತು ನಾಗರೀಕ ಸರಬರಾಜು ಮಂತ್ರಿಗಳು).—

ಅ) ಬಂದಿದೆ. ಹುಬ್ಬಳ್ಳಿ-ಧಾರವಾಡ ಮಹಾನಗರ ಸಭೆಯ ಮಾಲ್ಕಿ ವಟನ್ ಮಾರ್ಕೆಟ್ ಪೂರ್ವ ಭಾಗಕ್ಕೆ ಹೊಂದಿಕೊಂಡಿರುವ ಕ್ರಿಶ್ಚಿಯನ್ ಬರಿಯಲ್ ಗ್ರೌಂಡ್ (ಸ್ಮಶಾನ)ದಲ್ಲಿ ಹಿಂದಿನ ಬ್ರಿಟಿಷ್ ಅಧಿಕಾರಿಗಳ ಸಮಾಧಿಗಳು ಇದ್ದು ಅದರಲ್ಲಿ ಫ್ಯಾಕರೆ ಅಧಿಕಾರಿಯ ಸಮಾಧಿಯೂ ಇರುತ್ತದೆ.

ಆ) ಮಹಾನಗರ ಸಭೆಯಿಂದ ಈ ಸಮಾಧಿಗಳ ಸಂರಕ್ಷಣೆಗಾಗಿ ಅದರ ಸುತ್ತಲೂ ಆವರಣ ಗೋಡೆಯನ್ನು ಸನ್ ೧೯೮೭-೮೮ರಲ್ಲಿ ರೂ. ೫೧೦೩-೦೦ ಖರ್ಚು ಮಾಡಿ ದುರಸ್ತಿ ಮಾಡ ಲಾಗಿದೆ. ಸದರಿ ಜಾಗದ ಸ್ವಚ್ಛತೆಯನ್ನು ಸಹ ಕಾಯ್ದುಕೊಂಡು ಹೋಗಲಾಗುತ್ತಿದೆ.

ಸುಬ್ರಮಣ್ಯ ನಗರದ ಕೆರೆ ಅಂಗಳದ ಬಗ್ಗೆ

೬೩೯. ಶ್ರೀ ಎಂ. ಎಸ್. ಕೃಷ್ಣನ್ (ರಾಜಾಜಿನಗರ).—ಮಾನ್ಯ ಕಾನೂನು, ಸಂಸದೀಯ ವ್ಯವಹಾರಗಳು, ಆಹಾರ ಮತ್ತು ನಾಗರೀಕ ಸರಬರಾಜು ಹಾಗೂ ನಗರಾಭಿವೃದ್ಧಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ರಾಜಾಜಿನಗರ ಕ್ಷೇತ್ರದಲ್ಲಿರುವ ಸುಬ್ರಮಣ್ಯ ನಗರ (ಮಿಲ್ಕ್ ಕಾಲೋನಿ) ಕೆರೆ ಅಂಗಳದ ಪ್ರದೇಶವನ್ನು ಖಾಸಗಿಯವರು ತಮ್ಮದೇ ಎಂದು ಹೇಳಿ ನ್ಯಾಯಾಲಯದಿಂದ ತಡೆ ಆಜ್ಞೆ ತಂದಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ?